ಸದರಿ ಆಸ್ಪತ್ರೆಯು ಪ್ರಸ್ತುತ 50 ಹಾಸಿಗೆಗಳ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅದಕ್ಕನುಗುಣವಾಗಿ ಮೂಲ ಸೌಕರ್ಯ ಒದಗಿಸಲಾಗಿದೆ.

ಗುಡಿಬಂಡೆ ಸಾರ್ವಜನಿಕ ಆಸ್ಪತ್ರೆಯಲ್ಲಿ 5 ತಜ್ಞ ವೈದ್ಯರ ಹುದ್ದೆಗಳು ಹಾಗೂ 1 ದಂತ ವೈದ್ಯರ ಹುದ್ದೆ ಮಂಜೂರಾಗಿವೆ. ಈ ಪೈಕಿ, 4 ತಜ್ಞ ವೈದ್ಯರ ಹುದ್ದೆಗಳು ಭರ್ತಿಯಾಗಿವೆ ಮತ್ತು 1 ತಜ್ಞ ವೈದ್ಯ ಹಾಗೂ 1 ದಂತ ವೈದ್ಯ ಹುದ್ದೆಗಳು ಖಾಲಿ ಇವೆ. ಮುಂದುವರೆದು, ಈ ಆಸ್ಪತ್ರೆಗೆ 27 ಇತರೆ ವೃಂದದ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 14 ಹುದ್ದೆಗಳು ಭರ್ತಿಯಾಗಿವೆ ಹಾಗೂ 13 ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಹುದ್ದೆಗಳ ಪೈಕಿ 8 ಗ್ರೂಪ್-ಡಿ ಹುದ್ದೆಗಳಾಗಿರುತ್ತವೆ.

ಸದರಿ ಆಸ್ಪತ್ರೆಯ 100 ಹಾಸಿಗೆಗಳ ಸಾಮರ್ಥ್ಯದ ಕಟ್ಟಡ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. ಈ ಆಸ್ಪತ್ರೆಯು ಪ್ರಸ್ತುತ 50 ಹಾಸಿಗೆಗಳ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅದಕ್ಕನುಗುಣವಾಗಿ ಮೂಲ ಸೌಕರ್ಯ ಒದಗಿಸಲಾಗಿದೆ.

ಮಂಜೂರಾದ ಅನುದಾನ

250 (412) ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು) :- ಮಾನ್ಯ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿಗೆ ಪಶು ಸಂಗೋಪನಾ ಇಲಾಖೆಯಿಂದ 2009-10ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೂ ಮಂಜೂರಾದ ಅನುದಾನವೆಷ್ಟು ; (ಯೋಜನಾವಾರು ವಿವರ ನೀಡುವುದು)

ಆ) ಮಂಜೂರಾದ ಅನುದಾನದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನೆ ಸಚಿವರು):-

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿಗೆ ಪಶುಸಂಗೋಪನಾ ಇಲಾಖೆಯಲ್ಲಿ 2009-10ನೇ ಸಾಲಿನಿಂದ ಇದುವರೆವಿಗೂ ಮಂಜೂರಾದ ಅನುದಾನದ ವಿವರಗಳು

ಈ ಕೆಳಕಂಡಂತಿವೆ.

ರೂ. ಲಕ್ಷಗಳಲ್ಲಿ

ಕ್ರ.ಸಂ.	ಯೋಜನೆ ವಿವರ	2009–10	2010–11	2011–12
1	ಜಿಲ್ಲಾ/ತಾಲ್ಲೂಕ್ ಪಂಚಾಯತ್ ಕಾರ್ಯಕ್ರಮ	10.20	13.60	16.92
2	ರಾಜ್ಯ ವಲಯ	3.90	21.31	0.00

ಯೋಜನೆಯ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಮಂಜೂರಾದ ಅನುದಾನದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಔಷಧಿ ಮತ್ತು ರಾಸಾಯನಿಕ ಪದಾರ್ಥಗಳು ಮತ್ತು ಸಾಮಗ್ರಿಗಳ ಸರಬರಾಜು :– ಸದರಿ ಕಾರ್ಯಕ್ರಮದಲ್ಲಿ ದ್ರವಸಾರಜನಕ, ಶೀತ್‌ಗಳು, ಕೃತಕ ಗರ್ಭಧಾರಣಾ ಔಷಧಿಗಳು ಹಾಗೂ ಜಾನುವಾರು ಚಿಕಿತ್ಸೆಗೆ ಬೇಕಾದ ಔಷಧಿ ಮತ್ತು ರಾಸಾಯನಿಕಗಳನ್ನು ಖರೀದಿಸುವುದು.

2. ಕಟ್ಟಡಗಳು :– ಪಶುವೈದ್ಯ ಸಂಸ್ಥೆಗಳ ಮುಂದುವರೆದ ಕಾಮಗಾರಿ ಹಾಗೂ ಅವಶ್ಯಕವಾಗಿ ದುರಸ್ತಿಯಾಗಬೇಕಾದ ಪಶುವೈದ್ಯ ಸಂಸ್ಥೆಗಳ ಕಾಮಗಾರಿಗಾಗಿ ಅನುದಾನ ಒದಗಿಸುವುದು.

3. ಜಾನುವಾರು ಆರೋಗ್ಯ ಶಿಬಿರ :– ಈ ಕಾರ್ಯಕ್ರಮದಲ್ಲಿ ಗೊಡ್ಡು/ಬಂಜೆ ಜಾನುವಾರುಗಳ ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸುವುದು.

4. ಜೀವವೈದ್ಯ ತ್ಯಾಜ್ಯವಸ್ತುಗಳ ವಿಲೇವಾರಿ :– ಈ ಯೋಜನೆಯಲ್ಲಿ ಜೀವವೈದ್ಯ ತ್ಯಾಜ್ಯವಸ್ತುಗಳ ವಿಲೇವಾರಿಗೆ ಡೀಪ್ ಬರಿಯಲ್ ಪಿಟ್ ಮತ್ತು ಶಾರ್ಪ್‌ಪಿಟ್‌ಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅನುದಾನ ಒದಗಿಸುವುದು.

5. ವಿಶೇಷ ಘಟಕ ಯೋಜನೆ :– ಈ ಯೋಜನೆಯಲ್ಲಿ ರೈತರಿಗೆ ಒಂದು/ಎರಡು ಮಿಶ್ರತಳಿ ಹಸುಗಳನ್ನು ನೀಡಲಾಗಿದೆ. ಇಲಾಖೆಯಿಂದ ಶೇ. 60 ಸಹಾಯ ಧನ ಒದಗಿಸಲಾಗಿದೆ.

6. ಗಿರಿಜನ ಉಪಯೋಜನೆ :– ಈ ಯೋಜನೆಯಲ್ಲಿ ರೈತರಿಗೆ ಒಂದು/ಎರಡು ಮಿಶ್ರತಳಿ ಹಸುಗಳನ್ನು ನೀಡಲಾಗಿದೆ. ಇಲಾಖೆಯಿಂದ ಶೇ. 75 ಸಹಾಯ ಧನ ಒದಗಿಸಲಾಗಿದೆ.

7. ವಿಶೇಷ ಅಭಿವೃದ್ಧಿ ಯೋಜನೆ :– ಸದರಿ ಯೋಜನೆಯಡಿ ಜಾನುವಾರುಗಳ ಮೇವು ಪೂರೈಸಲು ನೀರಾವರಿ ಪ್ರದೇಶದಲ್ಲಿ ಬಹುವಾರ್ಷಿಕ ಮೇವಿನ ಬೆಳೆಯನ್ನು ಬೆಳೆಯಲು ಅನುದಾನ ಒದಗಿಸುವುದು.

8. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ :– ಈ ಯೋಜನೆಯಲ್ಲಿ ಕಟ್ಟಡಗಳ ನಿರ್ಮಾಣ/ವಾಣಿಜ್ಯ ಮೊಟ್ಟೆ ಕೋಳಿ ಸಾಕಾಣಿಕೆಗೆ (ರೂ. 100 ಲಕ್ಷ ಸಬ್ಸಿಡಿ–1000 ಕೋಳಿ ಘಟಕ) ಅನುದಾನ ನೀಡುವುದು.

ಅನುಬಂಧ–1

ಕ್ರ.ಸಂ	ಯೋಜನೆಯ ಹೆಸರು	ಮಂಜೂರಾದ ಅನುದಾನ ರೂ. ಲಕ್ಷಗಳಲ್ಲಿ		
		2009-10	2010-11	2011-12
	ಜಿಲ್ಲಾ ಪಂಚಾಯತ್ ಕಾರ್ಯಕ್ರಮ/ ತಾಲ್ಲೂಕ ಪಂಚಾಯತ್ ಕಾರ್ಯಕ್ರಮ			
1	ಜಾನುವಾರು ಆರೋಗ್ಯ ಶಿಬಿರ	0.91	0.92	0.91
2	ಔಷಧಿ ಮತ್ತು ರಾಸಾಯನಿಕಗಳ ಖರೀದಿ	2.64	2.94	3.57
3	ಕಟ್ಟಡಗಳು	1.56	2.60	2.80
4	ವಿಶೇಷ ಘಟಕ ಯೋಜನೆ	3.00	2.74	3.02
5	ಗಿರಿಜನ ಉಪಯೋಜನೆ	2.09	2.93	2.29
6	ವಿಶೇಷ ಅಭಿವೃದ್ಧಿ ಯೋಜನೆ	0.00	1.47	2.55
7	ಜೀವವೈದ್ಯ ತ್ಯಾಜ್ಯವಸ್ತುಗಳ ವಿಲೇವಾರಿ	0.00	0.00	1.78
	ಒಟ್ಟು ಮೊತ್	10.20	13.60	16.92
	ರಾಜ್ಯ ಪಲಯ ಕಾರ್ಯಕ್ರಮಗಳು			
1	ವಿಶೇಷ ಘಟಕ ಯೋಜನೆ	0.60	6.72	0.00
2	ಗಿರಿಜನ ಉಪಯೋಜನೆ	1.20	13.13	0.00
3	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	2.10	1.46	0.00
	ಒಟ್ಟು ಮೊತ್	3.90	21.31	0.00